**<u>ಪ್ರಧಾನ ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ</u>**

**<u>ನ್ಯಾಯಾಲಯ, ಭಟ್ಕಳ.</u>**

**<u>ಸಿ. ಸಿ. ನಂಬರಃ 1125/2022</u>**

**ಫಿರ್ಯಾದುದಾರರುಃ** ದಿ. ಜನತಾ ಕೊ-ಒಪರೇಟಿವ್ ಕ್ರೆಡಿಟ್ ಸೊಸೈಟಿ ಲಿ. ಭಟ್ಕಳ
ಸರ್ಕಲ್ ಶಾಖೆ, ಭಟ್ಕಳ ಇದರ ಪರವಾಗಿ ಪ್ರತಿನಿಧಿಸುವವರು
ಶಾಖಾ ವ್ಯವಸ್ಥಾಪಕರು
ಶ್ರೀ ಮಂಜುನಾಥ ತಿಮ್ಮ ನಾಯ್ಕ

**- ವಿರುದ್ಧ -**

**ಆರೋಪಿತರುಃ** ಶ್ರೀ ಸುಧಾಕರ ನಾರಾಯಣ ನಾಯ್ಕ
ವಯಸ್ಸುಃ 40 ವರ್ಷ,
ಸಾಃ ಬಗ್ಗಿಮನೆ, ಮುಠ್ಠಳ್ಳಿ, ,ಭಟ್ಕಳ.

**<u>ಆಪಾದನೆ</u>**

ದಿನಾಂಕಃ 16-09-2019 ರಂದು ಶ್ರೀ ಮಂಜುನಾಥ ನಾರಾಯಣ ನಾಯ್ಕರವರು ರೂ.50,000/- (ರೂಪಾಯಿ ಐವತ್ತು ಸಾವಿರ ಮಾತ್ರ) ಹಣವನ್ನು ಸಾಲದ ಖಾತೆ ಸಂಖ್ಯೆ CDL 1355 ರಲ್ಲಿ ವಾರ್ಷಿಕ ಶೇಕಡಾ 16% ಬಡ್ಡಿ ದರದಂತೆ ಗೃಹ ಬಳಕೆ ಸಾಲವಾಗಿ ಪಡೆದುಕೊಂಡಿದ್ದು, ಆರೋಪಿತರಾದ ನೀವು ಸದ್ರಿ ಸಾಲಕ್ಕೆ ಜಾಮೀನುದಾರರಾಗಿರುತ್ತೀರಿ. ಮತ್ತು ಸದ್ರಿ ಸಾಲವನ್ನು ಬಡ್ಡಿ ಸಮೇತವಾಗಿ ಮರುಪಾವತಿಸುವುದಾಗಿ ಕರಾರು ಪತ್ರ, ಡಿಮಾಂಡ ಪ್ರಾಮಿಸರಿ ನೋಟ್ ಮತ್ತು ಇತರ ದಾಖಲೆಗಳನ್ನು ಬರೆದುಕೊಟ್ಟಿರುತ್ತೀರಿ. ಆದರೆ ಮುಖ್ಯ ಸಾಲಗಾರರು ಸದ್ರಿ ಸಾಲವನ್ನು ಮರುಪಾವತಿಸುವಲ್ಲಿ ವಿಫಲರಾಗಿರುತ್ತಾರೆ. ದಿನಾಂಕಃ 29-06-2021 ರಂದು ಸಾಲದ ಖಾತೆಯಲ್ಲಿ ಅಸಲು ಮತ್ತು ಬಡ್ಡಿ ಸೇರಿ ರೂ.53,347/- ಕಟ್‌ಬಾಕಿ ಆಗಿರುತ್ತದೆ. ಪಿರ್ಯಾದಿ ಸಂಸ್ಥೆಯವರು ಸಾಲ ಮರುಪಾವತಿ ಬಗ್ಗೆ ನಿಮ್ಮನ್ನು ಹಲವಾರು ಬಾರಿ ಕೇಳಿದ ನಂತರ ಸದ್ರಿ ಸಾಲವನ್ನು ಮರು ಪಾವತಿಸುವ ಸಲುವಾಗಿ ನೀವು ಸಿಂಡಿಕೇಟ ಬ್ಯಾಂಕ ಭಟ್ಕಳ ಶಾಖೆ (ಈಗ ಕೆನರಾ ಬ್ಯಾಂಕ್)ಯ ಚೆಕ್ಕ ನಂಬರ್ 834393 ಮೊತ್ತ ರೂ.53,347/- (ರೂಪಾಯಿ ಐವತ್ತ ಮೂರು ಸಾವಿರದ ಮೂರು ನೂರಾ ನಲವತ್ತೇಳು ರೂಪಾಯಿ)ಕ್ಕೆ ದಿಃ 29-06-2021 ಎಂದು ನಮೂದಿಸಿ ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಸದ್ರಿ ಚೆಕ್ಕನ್ನು

ಫಿರ್ಯಾದಿದಾರರು ಅವರ ಬ್ಯಾಂಕರ್ ರಾದ ಸಿಂಡಿಕೇಟ ಬ್ಯಾಂಕ ಭಟ್ಕಳ ಶಾಖೆ (ಈಗ ಕೆನರಾ ಬ್ಯಾಂಕ್)ಯಲ್ಲಿ ನಗಧೀಕರಣಕ್ಕಾಗಿ ಹಾಜರಪಡಿಸಿದಾಗ, "Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 13-09-2021 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 23-09-2021 ರಂದು ತಮ್ಮ ವಕೀಲರ ಮೂಲಕ ನೋಟಸ್‌ನ್ನು ರಜಿಸ್ಟರ್ಡ ಪೋಸ್ಟ ಮುಖಾಂತರ ನಿಮಗೆ ನೀಡಿದ್ದು, ಸದ್ರಿ ನೋಟಿಸನ್ನು ನೀವು ಸ್ವಿಕರಿಸದ ಕಾರಣ Unclaimed ಅಂತಾ ದಿಃ 07-10-2021 ರಂದು ವಾಪಾಸ್ಸು ಬಂದಿರುತ್ತದೆ. ಆದರೂ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ - ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ - Yes

ಪ್ರಶ್ನೆ - ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – Pleaded not guilty.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**Sd/-**

**(ಶ್ರೀಮತಿ.ದೀಪಾ ಅರಳಗುಂಡಿ)**

ಪ್ರಧಾನ ಸಿವಿಲ್ ಜಡ್ಜ ಮತ್ತು

ದಿನಾಂಕಃ 20-07-2024. ಪ್ರ. ದ. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.